# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ.ನಂಃ **574/2023**

| | | |
|---|---|---|
| ಸಾಕ್ಷಿಯ ಹೆಸರು | ಃ ವಿನಯ್ ಕುಮಾರ್ | ಸಿ.ಡಬ್ಲ್ಯೂ ಃ 19 |
| ತಂದೆ ಹೆಸರು | ಃ ಲೇ. ಚೆಲುವರಂಗಯ್ಯ | ಪಿ.ಡಬ್ಲ್ಯೂಃ 09 |
| ವಯಸ್ಸು | ಃ 34 **ವರ್ಷ** | ಪ್ರಮಾಣೀಕರಿಸಿದ ದಿಃ 24.07.2026. |
| ವೃತ್ತಿ | ಃ ಎಸ್ ಐ | |
| ವಾಸ | ಃ ಹಾಸನ | |

ಸಾಕ್ಷಿಗೆ ವಿ ಸಿ ಮುಖಾಂತರ ಪ್ರಮಾಣ ವಚನ ಭೋಧಿಸಲಾಯಿತು.ಕೋ ಆಡಿನೇಟರ್ ಕಛೇರಿ ಡಬ್ಲೂ ಸಿ 299 ನವಿತಾ ಇರುತ್ತಾರೆ.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ರವರಿಂದಃ

ನಾನು 2020 ನವೆಂಬರ್ ರಿಂದ 2024 ಆಗಸ್ಟ್ ರವರೆಗೆ ಹೊಳೆನರಸೀಪುರ ನಗರ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

1. ದಿನಾಂಕ 12.10.2022 ರಂದು ಚಾ ಸಾ 18 ರವರಿಂದ ಕಡತವನ್ನು ಪಡೆದು ಚಾಸಾ 15 ರವರಿಗೆ ಅಪಘಾತ ಪಡಿಸಿದ ವಾಹನವನ್ನು ಪತ್ತೆ ಮಾಡಲು ನೇಮಿಸಿದ್ದೆ. ಅದೇ ದಿನಾ ಅವರು ಸದರಿ ವಾಹನವನ್ನು ಜಕ್ಕವಳ್ಳಿ ಬಳಿ ಪತ್ತೆ ಮಾಡಿ ಅದನ್ನು ತಂದು ಗ್ರಾಮಾಂತರ ಠಾಣೆ ಆವರಣದಲ್ಲಿ ಹಾಜರಿಸಿದರು. ಅದನ್ನು ಚಾಸಾ 10, 11 ಮತ್ತು 15 ರವರ ಸಮಕ್ಷಮ ಪರಿಶೀಲಿಸಲಾಗಿ ಅದು ಕೆಂಪು ಬಣ್ಣದ ಕೆ ಎ 41 ಯು 5699 ಸ್ಪಂಡರ್ ಪ್ಲಸ್ ಬೈಕಾಗಿದ್ದು ಅದನ್ನು ಬೆಳಿಗ್ಗೆ 10.15 ರಿಂದ 11.00 ರವರೆಗೆ ಅಮಾನತ್ ಪಡಿಸಿಕೊಂಡಿದ್ದು, ಠಾಣಾ ಮಾಲು ಪಟ್ಟಿ ಸಂಖ್ಯೆ 106/2022 ರಲ್ಲಿ ನಮೂದಿಸಿ, ಅದನ್ನು ಐ ಎಮ್ ವಿ ವರದಿಗಾಗಿ ನ್ಯಾಯಾಲಯಕ್ಕೆ ಹಾಜರಿಸಿದೆ. ಆ ಸಮಯದಲ್ಲಿ ಛಾಯಚಿತ್ರ ತೆಗೆದು ಕಡತಕ್ಕೆ ಅಳವಡಿಸಿದೆ. ಸಾಕ್ಷಿಗೆ ನಿ ಪಿ 12 ತೋರಿಸಲಾಗಿ ಅದರಲ್ಲಿ ಅವರು ಸಹಿಯನ್ನು ಗುರುತಿಸಿದ ಮೇರೆಗೆ ಸಹಿಯನ್ನು ನಿ ಪಿ 12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾಲುಪಟ್ಟಿ ಯನ್ನು ತೋರಿಸಲಾಗಿ ಅದರಲ್ಲಿ ಅವರು ಸಹಿಯನ್ನು ಗುರುತಿಸಿದ ಮೇರೆಗೆ ಅದನ್ನು ನಿ ಪಿ 16 ಮತ್ತು ಸಹಿಯನ್ನು ನಿ ಪಿ 16(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿ ಪಿ 12ಬಿ ನಲ್ಲಿ ತಮ್ಮನ್ನು ಮತ್ತು ಸಹಿಯನ್ನು ಗುರುತಿಸಿದ್ದು ಸಹಿಯನ್ನು ನಿ ಪಿ 12(ಸಿ) ಎಂದು ಗುರುತಿಸಲಾಯಿತು. ಚಾಸಾ 15 ರವರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿಕೊಂಡು , ಅದೇ ದಿನಾ ಚಾಸಾ 20 ರವರಿಗೆ ಈ ಕಡತವನ್ನು ಹಸ್ತಾಂತರಿಸಿರುತ್ತೇನೆ.

පාටೀ ಸವಾಲುಃ ಆರೋಪಿ ಪರ ಶ್ರೀ ಜಿ ಜಿ  ವಕೀಲರ ಪರವಾಗಿ   ಶ್ರೀಮತಿ ಬಿ ಎಸ್ ಎನ್ ವಕೀಲರಿಂದಃ

1. ಮಹಜರ್ ಗೂ ಮುನ್ನ ಪಂಚರಿಗೆ ನೋಟೀಸ್ ನೀಡಿದ್ದೆ. ಅಮಾನತ್ ಮಹಜರ್ ಮಾಡಿದ್ದು ಠಾಣಾ ಆವರಣದಲ್ಲಿ. ಅಮಾನತ್ ಮಹಜರ್ ನಲ್ಲಿ ಬೈಕಿನ ಸಂಖ್ಯೆಯನ್ನು ನಮೂದು ಮಾಡಿದ್ದು ಅದರ ಆರ್ ಸಿ ಮತ್ತು ಚಾಸೀಸ್ ನಂಬರ್ ನಮೂದಿಸಿಲ್ಲ. ಸದರಿ ಬೈಕು ಸ್ಪ್ಲೆಂಡರ್ ಪ್ಲಸ್ ಆಗಿರುತ್ತದೆ.
2. ನಾನು ಯಾವುದೇ ಅಮಾನತ್ ಪಡಿಸಿಕೊಂಡಿಲ್ಲ, ನ್ಯಾಯಾಲಯಕ್ಕೆ ಮಾಲುಪಟ್ಟಿ ಹಾಜರಿಸಿಲ್ಲ, ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯಃ

ಮರು ವಿಚಾರಣೆ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ